ಋ) ಮುಖ್ಯಮಂತ್ರಿಗಳು ಕಾಮಗಾರಿ ನಡೆಯುತ್ತಿರುವ ಯಾವ ಯಾವ ಸ್ಥಳಗಳಿಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದ್ದಾರೆ ಚರ್ಚಿಸಿದ್ದಲ್ಲಿ ಅದರ ವಿವರಗಳೇನು ?

ೠ) ಸರ್ಕಾರದಲ್ಲಾಗುತ್ತಿರುವ ಅನವಶ್ಯಕ ವೆಚ್ಚಗಳನ್ನು ತಗ್ಗಿಸಿ ನೀರಾವರಿ ಕಾಮಗಾರಿಗಳನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಿ ನಮ್ಮ ಪಾಲಿನ ಒಂದು ತೊಟ್ಟು ನೀರನ್ನು ವ್ಯರ್ಥ ಮಾಡದೆ ಉಪಯೋಗಿಸಿಕೊಳ್ಳುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಇದೆ.

ಆ) ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳನ್ನು 2000 ಇಸವಿಯೊಳಗೆ ಪೂರ್ಣಗೊಳಿಸುವ ಬಗ್ಗೆ ವರ್ಷಾವಾರು ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇದರನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕೃಷ್ಣಾ ಕೊಳ್ಳದಲ್ಲಿ ನಿರ್ಮಾಣದ ವಿವಿಧ ಹಂತಗಳಲ್ಲಿರುವ ಹಾಗೂ ಇನ್ನು ಮುಂದೆ ಕೈಗೊಳ್ಳಬೇಕಾಗಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಇಂದಿನ ದರಗಳ ಪ್ರಕಾರ ಸುಮಾರು 6,620 ಕೋಟಿ ರೂ.ಗಳ ಅವಶ್ಯಕತೆಯಿದೆ.

ಈ) ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಹಣ ಸಂಗ್ರಹಣೆ ಮಾಡಲು ಅನುವಾಗುವಂತೆ ಕೃಷ್ಣಾ ಭಾಗ್ಯ ಜಲ ನಿಗಮವನ್ನು ಸ್ಥಾಪಿಸಲಾಗಿದೆ. ಕೃಷ್ಣಾ ಕೊಳ್ಳದ ಇತರ ಯೋಜನೆಗಳಿಗೆ ಅವಶ್ಯವಾದ ಹಣವನ್ನು ಒದಗಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಉ) ನೀರಾವರಿ ಬಾಂಡ್‌ಗಳ ಮೂಲಕ ರಾಜ್ಯದ ನೀರಾವರಿ ಯೋಜನೆಗಳಿಗೆ ಹಣ ಸಂಗ್ರಹಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರದ ಒಪ್ಪಿಗೆಯ ಅವಶ್ಯವಿದೆ. ಈ ಪ್ರಸ್ತಾವೆಯನ್ನು ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಇದುವರೆವಿಗೆ ಅನುಮತಿ ದೊರೆತಿಲ್ಲ.

ಊ) ಮುಖ್ಯಮಂತ್ರಿಗಳು ಹಲವಾರು ನೀರಾವರಿ ಯೋಜನೆಗಳ ವಲಯಗಳಿಗೆ ಭೇಟಿ ನೀಡಿ ಯೋಜನೆಗಳ ಪ್ರಗತಿಯ ಬಗ್ಗೆ ಪರಿವೀಕ್ಷಣೆ ಮಾಡಿರುವುದು ಅಲ್ಲದೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳೊಡನೆ ಚರ್ಚಿಸಿದ್ದಾರೆ.

ಋ) ಇದೆ.

ಕೃಷ್ಣಾ ಜಲಾನಯನ ಪ್ರದೇಶ ಯೋಜನೆ

238-ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಸರ್ಕಾರದ ತಯಾರಿಸಿರುವ ಬೃಹತ್ ಯೋಜನೆಯ ಪ್ರಕಾರ ಕೃಷ್ಣಾ ಜಲಾನಯನ ಪ್ರದೇಶದಲ್ಲಿರುವ ನೀರಾವರಿ ಯೋಜನೆಗಳ ಸಂಖ್ಯೆ ಅವುಗಳ ಅಡಿ ನೀರಾವರಿ ಸೌಲಭ್ಯ ಪಡೆಯುವ ಕ್ಷೇತ್ರ ಹಾಗೂ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದಿರುವ ಯೋಜನೆಗಳ ಸಂಖ್ಯೆ ?

ಆ) ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದಿರುವ ಕೃಷ್ಣಾ ಜಲಾನಯನ ಪ್ರದೇಶದಲ್ಲಿನ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಹೆಸರುಗಳನ್ನು ಒದಗಿಸುವುದು ?

ಇ) ಕೇಂದ್ರ ಸರ್ಕಾರದಿಂದ ಇನ್ನೂ ಒಪ್ಪಿಗೆ ದೊರೆಯಬೇಕಾಗಿರುವ ಯೋಜನೆಗಳ ಹೆಸರುಗಳು ?

ಈ) ಯಾವ ದಿನಾಂಕದಿಂದ ಇವುಗಳು ಒಪ್ಪಿಗೆಯನ್ನು ನಿರೀಕ್ಷಿಸುತ್ತಿವೆ ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ)1)ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು 51.

2) ಉದ್ದೇಶಿಸಿರುವ ನೀರಾವರಿ ಕ್ಷೇತ್ರ 25.73 ಕ್ಷೇತ್ರ ಹೆಕ್ಟೇರ್‌ಗಳು.

3) ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದಿರುವ ಯೋಜನೆಗಳು 8(ಪೂರ್ಣಗೊಳಿಸಿರುವ ಯೋಜನೆಗಳನ್ನು ಹೊರತುಪಡಿಸಿ)

ಆ) ಲಗತ್ತಿಸಲಾಗಿರುವ ಅನುಬಂಧ-1ರಲ್ಲಿ ಹೆಸರುಗಳನ್ನು ನೀಡಲಾಗಿದೆ.

ಇ) ಲಗತ್ತಿಸಲಾಗಿರುವ ಅನುಬಂಧ-2ರಲ್ಲಿ ವಿವರಗಳನ್ನು ನೀಡಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 238 ಕ್ಕೆ ಅನುಬಂಧ

ಅನುಬಂಧ - 1

(ಪೂರ್ಣಗೊಳಿಸಿರುವ ಯೋಜನೆಗಳನ್ನು ಹೊರತುಪಡಿಸಿ)

ಕ್ರಮ ಸಂಖ್ಯೆ	ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದಿರುವ ಯೋಜನೆಗಳು
1)	ಕೃಷ್ಣಾ ಮೇಲ್ದಂಡೆ ಯೋಜನೆ, ಹಂತ -1
2)	ಹಿಪ್ಪರಗಿ
3)	ಘಟ್ಟಪ್ರಭಾ ಹಂತ -111
4)	ಮಲಪ್ರಭಾ
5)	ತುಂಗಾಭದ್ರಾ ಎಡದಂಡೆ ಕಾಲುವೆ
6)	ತುಂಗಾಭದ್ರ ಬಲದಂಡೆ ಮೇಲ್ಪಟ್ಟ ಕಾಲುವೆ
7)	ಹಿರೇಹಳ್ಳ
8)	ಮಸ್ಕಿನಾಲಾ

ಅನುಬಂಧ-2

ಕ್ರ ಸಂ.	ಕೇಂದ್ರ ಸರ್ಕಾರದ ಒಪ್ಪಿಗೆ ನಿರೀಕ್ಷಿಸಲಾಗುತ್ತಿರುವ ಯೋಜನೆಯ ಹೆಸರು	ಯೋಜನೆಗಳು ಯಾವ ದಿನಾಂಕದಿಂದ ಒಪ್ಪಿಗೆ ನಿರೀಕ್ಷಿಸಲಾಗುತ್ತಿದೆ.
1)	ಕೃಷ್ಣಾ ಮೇಲ್ದಂಡೆ ಹಂತ-11	1993
2)	ಮಾರ್ಕಂಡೇಯ	1994

3)	ರಾಮ್‌ಥಾಲ್ ಏತ ನೀರಾವರಿ	1977
4)	ಭೀಮ ಏತ ನೀರಾವರಿ	1977
5)	ಭೀಮ ಹರಿ ನೀರಾವರಿ	1981
6)	ತುಂಗಾ ಮೇಲ್ದಂಡೆ	1991

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, 2000 ವರ್ಷದೊಳಗಾಗಿ ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರೆ, ಆ ಆರ್ಥಿಕ ಮತ್ತು ಭೌತಿಕದಲ್ಲಿ ಯಾವ್ಯಾವ ಕಾರ್ಯಕ್ರಮಗಳು ಇವೆ? 2000 ವರ್ಷದೊಳಗೆ ಅದನ್ನು ಮಾಡಲು ಸಾಧ್ಯವೇ? ಅದು ಎಂತೆಂತಹ ಕಾರ್ಯಕ್ರಮಗಳು ಎಂದು ಹೇಳಬೇಕು. ಇದು ಒಂದು. ಇನ್ನು ಎರಡನೆಯದಾಗಿ ನೀರಾವರಿ ಬಾಂಡ್ ಬಗ್ಗೆ ಕೇಂದ್ರ ಸರ್ಕಾರ ಅನುಮತಿ ಕೊಟ್ಟಿಲ್ಲ ಎಂದು ಹೇಳಿದಿರಿ. ಅದು ಒಂದು ವೇಳೆ ಅನುಮತಿ ಕೊಟ್ಟಿಲ್ಲ ಎಂದರೆ ಕೆಎಸ್‌ಎಫ್‌ಸಿ ಯವರು ಯಾವ ಪ್ರಕಾರ ರೈತರಿಂದ ಸಾಲ ತೆಗೆದುಕೊಂಡು ಮಾಡುತ್ತಾರೆ ಅದೇ ರೀತಿ ನೀವೇನಾದರೂ ಕೆಎಸ್‌ಎಫ್‌ಸಿ ಮಾಡುವಂತೆ ಮಾಡುವುದಕ್ಕೆ ಸಾಧ್ಯವಿದೆಯೇ? ಇನ್ನು 6,620 ಕೋಟಿ ರೂಪಾಯಿಗಳನ್ನು ತಾವು ಪ್ರತಿ ವರ್ಷ ಬಜೆಟ್‌ನಲ್ಲಿ ಇಟ್ಟು ಅದನ್ನು 2000 ವರ್ಷದೊಳಗೆ ಮಾಡುವುದಕ್ಕೆ ಸಾಧ್ಯವಿದೆಯೋ? ಇನ್ನು ತಾವು ಭಾಗ್ಯ ಜಲ ನಿಗಮ ಎಂದು ಮಾಡಿದ್ದೀರಿ, ಅದು ಎಷ್ಟರಮಟ್ಟಿಗೆ ಅನುಕೂಲವಾಗುತ್ತದೆ, ಅದರಿಂದ ಎಷ್ಟು ಸಾಧ್ಯವಾಗುತ್ತದೆ ಎಂದು ಉತ್ತರ ಹೇಳಬೇಕು. ಇನ್ನು ಮಾಂಜ್ರಾ ಲಿಫ್ಟ್ ಇರಿಗೇಷನ್ ಬಗ್ಗೆ ಏನೂ ಇಲ್ಲ. ನಾವು ಗೋದಾವರಿ ಬೇಸಿನ್‌ಗೆ ಬರುತ್ತೇವೆ, ಕೃಷ್ಣಾ ಬೇಸಿನ್‌ಗೆ ಬರುವುದಿಲ್ಲ. ನಮಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳಿದರು. ನಿಜಾಮ್ ಸಾಗರದಲ್ಲಿ ಒಳಗೆ, ಹೊರಗೆ ಇರತಕ್ಕಂಥ ನೀರು ಎಷ್ಟು ಎಂದು ಕೇಳಿದೆ. ಅದರ ಬಗ್ಗೆಯೂ ಸಹ ಯಾವ ಉತ್ತರವೂ ಅದರಲ್ಲಿ ಇಲ್ಲ. ಎಲ್ಲಾ ಜಬಾವತ್ ಪ್ರಕಾರ ಕೇಳಿದ್ದೆ. ಅದರ ಬಗ್ಗೆ ಏನೂ ಮಾಡುತ್ತೀರಿ? ತೆಲುಗು ಗಂಗಾ ಬಗ್ಗೆ ಆಂಧ್ರದವರು ಎಲ್ಲಾ ಮುಗಿಸಿಕೊಂಡರು. ಕಾವೇರಿ ಬಗ್ಗೆ ಇವರು ಮುಗಿಸಿಕೊಂಡರು. ಇದರ ಬಗ್ಗೆ ಸವಿಸ್ತಾರವಾಗಿ ತಾವು ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸ್ವಾಮಿ, ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮಗಳ ಬಗ್ಗೆ ಮಾನ್ಯ ಸದಸ್ಯರು ಏನು ವಿವರಣೆ ಕೇಳಿದ್ದಾರೆ ಅದಕ್ಕೆ ಹೇಳುವುದ್ದಾರೆ ಆರ್ಥಿಕ ಕಾರ್ಯಕ್ರಮ ಎಂದರೆ ಈಗ ಏನು 6.620 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಹೇಳಿದ್ದೇವೆ ಅದು ಆರ್ಥಿಕ ಕಾರ್ಯಕ್ರಮ. ಭೌತಿಕವಾಗಿ 25.22 ಲಕ್ಷ ಹೆಕ್ಟೇರ್‌ಗಳನ್ನು ಒಟ್ಟು ನೀರಾವರಿ ವ್ಯಾಪ್ತಿಗೆ ತರತಕ್ಕಂಥ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಿಕ್ಕೆ ವಿವಿಧ ಮಾರ್ಗಗಳನ್ನು ಸರ್ಕಾರ ಅನುಸರಿಸಬೇಕಾಗುತ್ತದೆ ಒಂದು. ಇವತ್ತು ಕೃಷ್ಣಾ ಜಲ ನಿಗಮದ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ಸಾಲವನ್ನು ಪಡೆದುಕೊಳ್ಳತಕ್ಕಂಥಾದ್ದು ಒಂದು ಆಲೋಚನೆ ಇದೆ. ಆದುದರಿಂದಲೇ ಈ ನಿಗಮವನ್ನು ಸ್ಥಾಪನೆ ಮಾಡಿದ್ದುದು ಈಗ ಸರ್ಕಾರ ಸಂಪನ್ಮೂಲಗಳನ್ನು ರೂಢಿಸಿ ಇದಕ್ಕೆ ಸಾಲವನ್ನು ಪಡೆದುಕೊಳ್ಳುವುದರ ಜೊತೆಗೆ ಈ ಕೃಷ್ಣಾ ಜಲ ನಿಗಮದ ವ್ಯಾಪ್ತಿಯಲ್ಲಿ ಸರ್ಕಾರದ ಸಂಪನ್ಮೂಲವನ್ನು ಕೂಡ ರೂಢಿಸಿ ಈ ಜಲ ನಿಗಮದ ವ್ಯಾಪ್ತಿಯಲ್ಲಿ ಬರದೇ ಇರತಕ್ಕಂಥ ಅನೇಕ ಯೋಜನೆಗಳಲ್ಲಿ ಹಣವನ್ನು ತೊಡಗಿಸತಕ್ಕಂಥಾದ್ದು. ಇದೇ ಸರ್ಕಾರದ ಮುಂದೆ ಇರತಕ್ಕಂಥ ಕಾರ್ಯಕ್ರಮ. ಈ ಕಾರ್ಯಕ್ರಮದ ಅನುಗುಣವಾಗಿ ನಾವು 2000 ಇಸವಿಯೊಳಗೆ ನಮ್ಮ ನೀರಿನ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇನ್ನೊಂದು ವಿಚಾರವೆಂದರೆ ಅವರು ಮಾಂಜ್ರಾದ ಬಗ್ಗೆ ಕೇಳಿದ್ದಾರೆ. ಆದರೆ ಇದು ಕೃಷ್ಣಾ ಕೊಳದ ಯೋಜನೆಗಳಿಗೆ

ಮಾತ್ರ ಈ ಪ್ರಶ್ನೆ ಸೀಮಿತವಾಗಿರುವುದರಿಂದ ಗೋದಾವರಿ ಡೈವರ್ಷನ್‌ಗೆ ಬೇಕಾದರ ಉತ್ತರ ತರಿಸಿ, ಅದರ ಲೇಟೆಸ್ಟ್ ಪೊಜಿಷನ್ ಏನು ಇದೆ ಅದನ್ನು ಇವರಿಗೆ ಕೊಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹಣಕಾಸು ಸಂಸ್ಥೆ ಇದೆಯಲ್ಲ ಅವರು ಯಾವ ಪ್ರಕಾರ ಹಣ ತೆಗೆದುಕೊಳ್ಳುತ್ತಿದ್ದಾರೆ. ಅದೇ ಪ್ರಕಾರ ಮಾಡುವುದಕ್ಕೆ ಬರುವುದಿಲ್ಲವೇ? ನೀವು ಹಣ ಎಲ್ಲಿಂದ ತರುತ್ತೀರಿ ಅದಕ್ಕೆ ಕೇಳಿದ್ದುದು ತಾವು ಹಣವನ್ನ ರೈತರ ಹತ್ತಿರ ಸಾಲದ ರೂಪದಲ್ಲಿ ತೆಗೆದುಕೊಳ್ಳಬಹುದಲ್ಲ. ನೀವು ಆ ರೀತಿ ಮಾಡುವುದಕ್ಕೆ ಏನಾದರೂ ಸಾಧ್ಯವಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ : ಕೃಷ್ಣಾ ಜಲ ನಿಗಮದ ವ್ಯಾಪ್ತಿಯಲ್ಲಿ ಈಗ ಎಷ್ಟು ಸಾಲವನ್ನು ನಾವು ಎತ್ತಬೇಕು ಎನ್ನುವುದನ್ನು ನಿರ್ಣಯ ತೆಗೆದುಕೊಂಡಿದ್ದೇವೆ. 800 ಕೋಟಿ ರೂಪಾಯಿಗಳನ್ನು ನಾವು ಮುಂದಿನ ವರ್ಷ 95-96ನೇ ಸಾಲಿನಲ್ಲಿ ಎರಡು ಕಂತಿನಲ್ಲಿ ಸಾಲವನ್ನು ಪಡೆಯಬೇಕೆಂದು ಈಗಾಗಲೇ ನಿರ್ಣಯ ಮಾಡಿದ್ದೇವೆ. ಆ ನಿರ್ಣಯಕ್ಕೆ ಅನುಗುಣವಾಗಿ ಸರ್ಕಾರ ಅದನ್ನು ಪ್ರಕಟಣೆ ಮಾಡುತ್ತದೆ. ಮಾನ್ಯ ಗುರುಪಾದಪ್ಪನವರು ಆ ಭಾಗದ ರೈತರಿಗೆ ಉತ್ತೇಜನ ಕೊಟ್ಟು ಹಣ ಸಂಗ್ರಹಣೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು.

SRI H.N. NAGEGOWDA : Sir, I would like to know the stand of the Government, because 2,000 AD is often insisted, But the legal postition is, no Court can pronounce the judgement which cannot be executed. No Court can pass a decree which cannot be executed. So also, no Tribunal can pass an award which cannot be implemented.

ಇಲ್ಲಿ ಅವರಿಗೆ ಇಷ್ಟು ದುಡ್ಡು ಕೊಟ್ಟು ಈ ಇಸವಿಯೊಳಗೆ ಇವುಗಳನ್ನು ಮುಗಿಸಿ ಎಂದು ಏನೂ ಆರ್ಡರ್ ಕೊಟ್ಟಿಲ್ಲ. ಇದನ್ನು ಮುಗಿಸುವುದಕ್ಕೂ ಆಗುವುದಿಲ್ಲ. Let us be frank ಪ್ರಾಕ್ಟಿಕಲ್ಲಾಗಿ ಯೋಚನೆ ಮಾಡಿಕೊಳ್ಳಿ. ಏಕೆಂದರೆ ಈಗ 6,620 ಕೋಟಿ ರೂಪಾಯಿಗಳ ಎಸ್ಕ್ಯುಲೇಷನ್ ಇರುತ್ತದೆ. ಸರ್ಕಾರ ಇಲ್ಲಿಯವರೆಗೆ ಹೇಳಿರುವಂತೆ ಮಾಡಿರುವ ಖರ್ಚು ನೋಡಿಕೊಂಡು ಬಂದರೆ ಇದು ಎಸ್ಕ್ಯುಲೇಷನ್‌ಗೆ ಆಗುವುದಿಲ್ಲ. ನಾವು ಹಾಕಿರತಕ್ಕಂಥ ಬಜೆಟ್. ಎಂದರೆ ಅಲ್ಲಿ ಒರಿಜನಲ್ ಎಸ್ಟಿಮೇಟ್ ಅಷ್ಟೇ ಉಳಿದುಕೊಂಡಿರುತ್ತದೆ. ಆದುದರಿಂದ ಸರ್ಕಾರದ ನಿಲುವು ಏನು? ಈ ಎರಡು ಸಾವಿರ ಇಸವಿಯೊಳಗೆ ಇದು ಒಂದು ಬೇಕಾಗುತ್ತದೆ. ಈ 6,620 ಕೋಟಿ ರೂ. ನೀವು 2000 ಸಾವಿರ ಇಸವಿಯೊಳಗೆ ಮುಗಿಸುತ್ತೇವೆ ಎಂದರೂ ಅದರ ಎಸ್ಟಿಮೇಟ್ 9 ಸಾವಿರ ಕೋಟಿ ರೂಪಾಯಿಗಳವರೆಗೂ ಹೋಗಬಹುದು. ಅದಕ್ಕೆ ನೀವು ಒಂದು ವರ್ಷದ ಪ್ಲಾನ್ ಬಜೆಟ್ ಹೇಳಿದರೆ ಆಗುವುದಿಲ್ಲ. 5 ವರ್ಷದಲ್ಲಿ ಹಂತ ಹಂತವಾಗಿ ಎಷ್ಟು ಖರ್ಚು ಮಾಡುತ್ತೇವೆ ಎಂದು ಹೇಳಬೇಕು. ಅದಕ್ಕೆ ಏನಾದರೂ ಯೋಜನೆ ಮಾಡಿಕೊಂಡಿದ್ದೀರಾ? ಉಳಿದ ಪ್ರಶ್ನೆಗಳನ್ನು ನಂತರ ಕೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸ್ವಾಮಿ, ಟ್ರಿಬ್ಯೂನಲ್ ಈ ತೀರ್ಮಾನ ಕೊಟ್ಟು ಬಹಳ ದಿವಸವಾಗಿದೆ. ಈ ತೀರ್ಮಾನಕ್ಕೂ ನಮ್ಮ ನಿರ್ಣಯಕ್ಕೂ ಒಂದಕ್ಕೊಂದು ಸಂಬಂಧ ಆಗುವುದಿಲ್ಲ. ಟ್ರಿಬ್ಯೂನಲ್ ಕೊಟ್ಟಿರುವ ನಿರ್ಣಯ ಒಪ್ಪಿಕೊಳ್ಳುತ್ತೇವೆ. ಒಂದೇ ಒಂದು ಹೇಳಿದ್ದಾರೆ 2000 ಇಸವಿಯೊಳಗೆ 730 ಟಿಎಂಸಿಎಫ್‌ದ ನೀರನ್ನು ಬಳಕೆ ಮಾಡಿಕೊಳ್ಳುತ್ತೇನೆ. ಅದಾದಮೇಲೆ ಪುನಃ ಮೂರು ರಾಜ್ಯಗಳಿಗೆ ಸಮ್ಮತಿಸುವಂತೆ ಇನ್ನೊಂದು ಟ್ರಿಬ್ಯೂನಲ್‌ನ್ನು ನೀವು ಬೇಕಾದರೆ ಮಾಡಿಕೊಳ್ಳಬಹುದು. ಆದರೆ ಇದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನು ಮುಂದೆ ಇರತಕ್ಕಂಥಾದ್ದು

730 ಟಿಎಂಸಿ ನೀರನ್ನು ಎರಡು ಸಾವಿರ ಇಸವಿಯೊಳಗೆ ನಾವು ಉಪಯೋಗ ಮಾಡಿಕೊಳ್ಳಬೇಕು. 1995-96ಕ್ಕೆ 1,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಈಗಾಗಲೇ ನಿರ್ಣಯ ಮಾಡಿದ್ದೇವೆ. ಅದರಲ್ಲಿ 800 ಕೋಟಿ ರೂಪಾಯಿಗಳು ಸಾರ್ವಜನಿಕರಿಂದ ಸಾಲ ಎತ್ತುತ್ತೇವೆ. ಇನ್ನು 200 ಕೋಟಿ ರೂಪಾಯಿಗಳು ವರ್ಲ್ಡ್ ಬ್ಯಾಂಕ್ ರಿ-ಎಂಬರ್ಸ್‌ಮೆಂಟ್‌ನಿಂದ ಬರತಕ್ಕಂಥ ಹಣ. 1,000 ಕೋಟಿ ರೂಪಾಯಿಗಳನ್ನು ಮುಂದಿನ ವರ್ಷಕ್ಕೆ ನಾವು ಖರ್ಚುಮಾಡತಕ್ಕಂಥಾದ್ದರ ಬಗ್ಗೆ ಅವಶ್ಯಕವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅದಕ್ಕೆ ಇನ್‌ಫ್ರಾಸ್ಟ್ರಕ್ಚರ್ ಇದೆಯೋ ಇಲ್ಲವೋ ಅದೆಲ್ಲಾ ಪ್ರಶ್ನೆ ಇಲ್ಲ. ನಾನು ಈ ಮನೆಯಲ್ಲಿ ಗ್ಯಾರಂಟಿ ಕೊಡುತ್ತಿದ್ದೇನೆ. Next year we are going to spend 1000 crores. ಅದಕ್ಕೆ ಕಡಿಮೆ ಇಲ್ಲದ ರೀತಿಯಲ್ಲಿ ನಾವು ಒಂದು ವ್ಯವಸ್ಥೆ ಮಾಡಲಿಕ್ಕೆ ಸರ್ಕಾರದ ವತಿಯಿಂದ ಹೊಣೆಗಾರಿಕೆ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಎರಡು ಸಾವಿರ ಇಸವಿಯೊಳಗೆ ಮುಗಿಯುವಂತಹ ಸೂಚನೆ ಇಲ್ಲವೆನ್ನತಕ್ಕಂಥದ್ದು ಎಲ್ಲರ ಅನಿಸಿಕೆ. ಅದರಲ್ಲೇನು ಎರಡು ಅಭಿಪ್ರಾಯವಿಲ್ಲ. ಇದರ ಬಗ್ಗೆ ಆತಂಕ ಮತ್ತು ಕಳವಳವಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಕಾಳಜಿ ಇಲ್ಲವೆಂದು ನಾನು ಹೇಳುತ್ತಿಲ್ಲ. ಇದು 2000 ಸಾವಿರ ಇಸವಿಯಲ್ಲಿ ಮುಗಿಸುವಂತಹ ಶಕ್ತಿ, ಸಾಮರ್ಥ್ಯ ಸರ್ಕಾರಕ್ಕೆ ಇದೆಯೇ? ಇದರ ಬಗ್ಗೆ ತೆರೆಮರೆಯಲ್ಲಿ ಎಲ್ಲಾ ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತುಕತೆ ಆಡಿ, ಈ ಮಾತುಕತೆಯ ಮೂಲಕ ಮುಗಿಸುವಂತಹ ವ್ಯವಸ್ಥೆ ಹಿಂದೆ ಮಾನ್ಯ ವೀರೇಂದ್ರಪಾಟೀಲರು ಇದ್ದಾಗ ಒಂದು ಸಲ ಸಭೆ ಸೇರಿದ್ದರು. ಇದೇ ರೀತಿ ಮಿಕ್ಕ ಮುಖ್ಯಮಂತ್ರಿಯವರ ಜೊತೆಯಲ್ಲೂ ಮಾತನಾಡುವಂತಹ ವ್ಯವಸ್ಥೆ ನಡೆದಿತ್ತು. ಈಗ ಈಗಿನ ಮುಖ್ಯಮಂತ್ರಿಯವರು ಸಂಬಂಧಪಟ್ಟಂತಹ ರಾಜ್ಯದ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತುಕತೆಯಾಡಿ ನಮ್ಮ ಹಕ್ಕನ್ನು ಕಾಪಾಡುವಂತಹ ವ್ಯವಸ್ಥೆಗೆ ಮುನ್ನುಗ್ಗುತ್ತೀರಾ? ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸಮಸ್ಯೆಯ ಗಾತ್ರ ಬಹಳ ದೊಡ್ಡದು. ನಾವು ಎಷ್ಟೊಂದು ಹಣವನ್ನು ಸರ್ಕಾರದ ಆತಿಮಿತಿಯೊಳಗೆ ಕೂಡಿಸುವಂಥಾದ್ದು ಸುಲಭ ಸಾಧ್ಯವೆಂದು ನಾನು ರಾಜಕೀಯವಾದ ಮಾತನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈ ಒಂದು ವಿಷಯದಲ್ಲಿ ನನ್ನದೇ ಆದಂತಹ ಅಭಿಪ್ರಾಯವನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಸಭೆಯನ್ನು ಕರೆದು ಚರ್ಚೆ ಮಾಡುವುದಕ್ಕಾಗಲೀ ಪ್ರಧಾನಮಂತ್ರಿಯವರ ಮುಂದೆ ಹೋಗಿ ನಮಗೆ ಇನ್ನು ಟೈಮ್ ಎಕ್ಸ್‌ಟೆನ್ಷನ್ ಕೊಡಿ ಎಂದು ಕೇಳುವುದರಲ್ಲಿ ನನ್ನದು ತಾತ್ವಿಕ ಭಿನ್ನಾಭಿಪ್ರಾಯವಿದೆ. ಆದರೆ 2000 ಇಸವಿಯಲ್ಲಿ ನಾವು ರಾಜ್ಯದ ಮಹಾ ಜನತೆಯ ಸಹಕಾರ ಪಡೆದು, ಶಕ್ತಿ ಮೀರಿ ಮುಗಿಸುವುದಕ್ಕೆ ಪ್ರಯತ್ನ ಮಾಡತಕ್ಕಂಥದ್ದು ನಮ್ಮ ಮೊದಲನೆ ಕರ್ತವ್ಯ. ಈಗಾಗಲೇ ಶಕ್ತಿ ಮುಗಿಸುವುದಕ್ಕೆ ಆಗುವುದಿಲ್ಲ. ಇದರಲ್ಲಿ ನಮ್ಮ ಹಕ್ಕು ಹೋಗುತ್ತದೆ. ಅಥವಾ ಹಕ್ಕು ಉಳಿಯುತ್ತದೆ. ಇದರ ಬಗ್ಗೆ ಅರ್ಜಿ ಹಾಕುವುದು ಏನು ಇದೆ, ಅದು ಬೇಸಿಕಲಿ it will go against the principles.

ನನ್ನ ಮನಸ್ಸಿನಲ್ಲಿದೆ. ಏಕೆಂದರೆ ನಾನು ಇರುವ ವಿಷಯವನ್ನು ಹೇಳಿಬಿಡುತ್ತೇನೆ. ನಿಮ್ಮ ಊಹೆ 2000 ಸಾವಿರ ಇಸವಿಯಾದ ಮೇಲೆ ನಾವು ಆ ಹಕ್ಕನ್ನು ಕಳೆದುಕೊಂಡು ಬಿಡುತ್ತೇವೆ ಎಂಬ ಆ ದೃಷ್ಟಿಕೋನದಿಂದ ನಮಗೆ ಟೈಮ್ ಎಕ್ಸ್‌ಟೆನ್ಷನ್ ಕೊಡಿ ಎಂದು ಪ್ರಧಾನಮಂತ್ರಿಗಳಿಗೆ ಅರ್ಜಿಯನ್ನು ಹಾಕುವಂಥಾದ್ದು. ಇದರ ಬಗ್ಗೆ ಮಾಜಿ ಮುಖ್ಯಮಂತ್ರಿಗಳ ಸಭೆಯು ನಡೆದಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಟೈಮ್ ಕೇಳುತ್ತಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಮಾಜಿ ಮುಖ್ಯಮಂತ್ರಿಯವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಎಂದು ಸಲಹೆಯನ್ನು ನನಗೆ ಕೊಟ್ಟಿದ್ದರಿ. ಅದು ಹಿಂದೆ ಮಾಜಿ ಮುಖ್ಯಮಂತ್ರಿಗಳ ಸಭೆ ಸೇರಿ ನಾವು ಪ್ರಧಾನಮಂತ್ರಿಯವರ ಹತ್ತಿರ ಹೋಗಿ ಅರ್ಜಿ ಕೊಡುವಂತಹ ನಿರ್ಣಯ ಕೂಡ ಮಾಡಿ, ಅದು ನಡೆದಿದೆ. ಇವತ್ತು ಈ ಸ್ಥಾನದಲ್ಲಿ ನಿಂತು ನಾನು ಸರ್ಕಾರದಿಂದ ಹೇಳುವಂತಹ ಅಭಿಪ್ರಾಯ ಈ ಒಂದು ನೀರಿನ ಸಮಸ್ಯೆಯ ಬಗ್ಗೆ 200 ಸಾವಿರ ಇಸವಿಯೊಳಗೆ ನಾವು ನಮ್ಮ ನೀರಿನ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ಸದನದ ಎಲ್ಲಾ ಸದಸ್ಯರ ಸಹಕಾರ ಬೇಕು. ಇದರಲ್ಲಿ ನೀವು ಯಾರು ಹಿಂದೆ ಬೀಳುತ್ತೀರೆಂದು ನಾನು ಅಂದುಕೊಳ್ಳುವುದಿಲ್ಲ. ಇದಕ್ಕೆ ನಿಮ್ಮ ಸಹಕಾರವಿದೆ ಎಂದು ನಾನು ತಿಳಿದುಕೊಂಡು ಹೇಳುತ್ತಿದ್ದೇನೆ. ಇದಕ್ಕೆ ನಾವು ಏನು ಮಾಡುವುದಕ್ಕೆ ಸಾಧ್ಯವೋ ಅವೆಲ್ಲವನ್ನು ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ ಎಂಬ ಮಾತನ್ನು ಹೇಳುತ್ತೇನೆ. ಈಗ ಮಾಜಿ ಮುಖ್ಯಮಂತ್ರಿಗಳ ಹತ್ತಿರ ಯಾವ ವಿಷಯವನ್ನು ಚರ್ಚೆ ಮಾಡಬೇಕು. ಮಾನ್ಯ ನಂಜೇಗೌಡರು ನೀರಾವರಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಗೊತ್ತಿದೆ ಈಗ ಸ್ಕೀಮ್ (ಬಿ) ಬಗ್ಗೆ ಚರ್ಚೆ ಮಾಡುವುದಕ್ಕೆ 736 ಬಗ್ಗೆ TMC ಬಗ್ಗೆ ಚರ್ಚೆ ಯಾವ ಹತ್ತಿರ ಮಾಡಬೇಕಾದಿಲ್ಲ. It applies only to Scheme B.

ಇವತ್ತು ಸ್ಕೀಮ್ (ಬಿ) ಬಗ್ಗೆ ಏನು ಚರ್ಚೆ ಮಾಡಬೇಕು. ನಾವು ಮೊದಲು ನಮ್ಮ ನೀರಿನ ಉಪಯೋಗ ಮಾಡಿಕೊಂಡರೆ ಅಥವಾ ನಮ್ಮ ನೀರಿನ ಹಕ್ಕನ್ನು ಹಿಡಿದಿಟ್ಟುಕೊಂಡರೆ ಅದನ್ನು ಮಾಡುವಂತಹ ಶಕ್ತಿಸಾಮರ್ಥ್ಯವನ್ನು ನಾಡಿನ ಜನತೆಯ ಸಹಕಾರ ಮತ್ತು ಎಲ್ಲಾ ಸದಸ್ಯರ ಸಹಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ ಆಗ ನಾವು ಈ ಸ್ಕೀಮ್ (ಬಿ) ಬಗ್ಗೆ ಚರ್ಚೆ ಮಾಡಬಹುದು, ಚರ್ಚೆ ಮಾಡುವುದಕ್ಕೆ ಯಾವ ಆಂತರವೂ ಇಲ್ಲ. The Primary concer is about the Scheme A.

28 ಟಿ.ಎಂ.ಸಿ. ಅದಕ್ಕೆ ನಾನು ಇಷ್ಟೇ ಹೇಳುತ್ತೇನೆ. I am prepared to commit myself. ಇದರಲ್ಲಿ ನಾನು ಹಿಂದೆ ಹೋಗುವುದಿಲ್ಲ. ಈ ಸದನಕ್ಕೆ ನಾನು ಭಾಗಿಯಾಗುತ್ತೇನೆ. ಮುಂದಿನ ವರ್ಷ ಸಾವಿರ ಕೋಟಿ ಖರ್ಚು ಮಾಡುತ್ತೇವೆಂದು ಹೇಳಿದ್ದೇವೆ.

I will go all out to spend that money.

ಅದರಲ್ಲಿ ಬರ್ಡನ್ ಆಗುತ್ತದೆ ಎನ್ನುವ ಪ್ರಶ್ನೆಯೇ ಇಲ್ಲ. ಆದರೆ ಸಬ್ಸಿಕ್ವೆಂಟ್ ಹಿಯರಿಂಗ್ ಏನು ಪ್ಲಾನ್ ಮಾಡಬೇಕು ಎನ್ನುವ ಬಗ್ಗೆ ನಿಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇನೆ. ಅದಕ್ಕಿಂತ ಮುಂದೆ ಹೋಗಬೇಕು ಎನ್ನುವ ಆಸೆಯೂ ಇದೆ. ಆರಂಭದಲ್ಲಿ ಶೂರತ್ವದ ಮಾತು ಬೇಡ. ಈಗ ಈ ವರ್ಷಕ್ಕೆ ಹೇಳಿದ್ದೇನೆ. ಒಂದು ಸಾವಿರ ಕೋಟಿ ರೂ.ಗಳ ಕೃಷ್ಣ ಮೇಲ್ದಂಡೆ ಯೋಜನೆಗೆ ಖರ್ಚು ಮಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇವೆ. ಈ ಮಧ್ಯೆ ಇನ್ನೂ ಸಂಪನ್ಮೂಲಗಳನ್ನು ಹೇಗೆ ರೂಢಿಸಿಕೊಳ್ಳಬೇಕು, 5 ವರ್ಷಗಳ ಒಳಗೆ ಹೇಗೆ ಮುಗಿಸಬೇಕು ಎನ್ನುವುದರ ಬಗ್ಗೆ ನಿಮ್ಮ ಸಲಹೆಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಅಪ್ಪರ್ ಕೃಷ್ಣ ಯೋಜನೆಯನ್ನು ಹಾಕಿದ್ದೇವೆ, ಇದು ಭಾರೀ ದೊಡ್ಡ ಯೋಜನೆಯಾಗಿದೆ. ಅದರ ಬಗ್ಗೆ ಎಷ್ಟು ಎಕರೆಗೆ, ಎಷ್ಟು ನೀರು ಉಪಯೋಗಿಸುವುದು ಮತ್ತು ಫೌಂಡೇಷನ್ ಹಾಕಿದ್ದೇವೆ, ಎಂಬುದನ್ನು ಅವರು ಹೇಳಲಿ. ಈಗ ಆಲಮಟ್ಟಿ ನಾರಾಯಣಪುರದಲ್ಲಿ

ಇವರು ಮಾಡಿರುವುದು ನೂರ ಒಂದು ಪ್ಲಸ್ ಐವತ್ತೆರಡು ಒಟ್ಟು ನೂರ ಐವತ್ತು ಮೂರು ಟಿ.ಎಂ.ಸಿ.ಫಿಟ್. ಈಗ 734ಕ್ಕೆ ನಿಲ್ಲಿಸಿ ಬಿಟ್ಟಿದ್ದೀರಿ. ಈಗ ಸ್ಕೀಮ್ ಬಿಗೆ ಸಪರೇಟಾಗಿ ಪ್ಲಾನ್ ಮಾಡುವುದಕ್ಕಾಗುವುದಿಲ್ಲಿ. ಈಗ ಅಪ್ಪರ್ ಕೃಷ್ಣದಲ್ಲಿ ನಮ್ಮ ಯೋಜನೆಯ ಪ್ರಕಾರ 402 ಟಿಎಂಸಿಫಿಟ್ ನೀರನ್ನು ಉಪಯೋಗಿಸಬೇಕಲ್ಲಾ ಅಷ್ಟು ಬೇಡವೆಂದರೆ ಪ್ರಾಕ್ಟಿಕಲ್ಲಾಗಿ ಅಲ್ಲಿಗೆ ನೀರು ಎಲ್ಲಿಂದ ಬರಬೇಕು? ಸ್ಕೀಮ್‌ನಿಂದ ಬರಬೇಕು. ನಿಮ್ಮ ಸ್ಕೀಮ್‌ನಲ್ಲಿರುವಂತಹದ್ದು 734 ನೀವು ಅಪ್ರೋಪ್ರಿಯೇಟ್ ಮಾಡಿ ಆಲ್‌ಟರ್‌ನೇಟಿವ್ ಮಾಡುತ್ತೀರೋ ಅದರ ಪ್ರಕಾರ ಅಪ್ಪರ್ ಕೃಷ್ಣಕ್ಕೆ ಇರುವುದು 153 ಟಿಎಂಸಿ ಅದನ್ನು ನೀವು ಒಪ್ಪುತ್ತಿರೆಂದು ಕಾಣುತ್ತದೆ. ಇನ್ನು ಕೆಲವು ಅಪ್ಪರ್ ಕೃಷ್ಣಕ್ಕೆ ಸೇರಿಸಿಲ್ಲ. ನೀವು ಕೊಟ್ಟಿರುವಂತಹ ಲಿಸ್ಟ್ ಅನ್ನು ನೋಡಿದ್ದೇನೆ. ಇದರ ಬಗ್ಗೆ ತಾವು ದಯಮಾಡಿ ಹೇಳಿ.

MR. SPEAKER : We have little time left. This question requires lot of time. Can we take it up for a wider discussion in some other form. Could you kindly co-operate with we?

ಬೇರೆ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ಅನೇಕ ಹೊಸ ಸದಸ್ಯರು ಕಳುಹಿಸಿದಂತಹ ಪ್ರಶ್ನೆಗಳು ಇವೆ.

ಶ್ರೀ ಹೆಚ್.ಡಿ. ದೇವೇಗೌಡ : ಈ ವಿಷಯದಲ್ಲಿ ಏನು ತೀರ್ಮಾನ ತೆಗೆದುಕೊಡರೂ ನಾನು ಸಿದ್ಧನಿದ್ದೇನೆ. ನಾನು ಯಾವ ತರಹ ಚರ್ಚೆಗೂ ತಯಾರಿದ್ದೇನೆ.

MR. SPEAKER : We will find the next appropriate time.

ಬೆಂಗಳೂರಿನ ಮೂತ್ರಪಿಂಡ ಹಗರಣ

250 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಎಷ್ಟು ಮೂತ್ರ ಪಿಂಡ ವಂಚನೆ ಹಗರಣ ಬೆಳಕಿಗೆ ಬಂದಿದೆ?

ಆ) ಈ ಬಗ್ಗೆ ಎಷ್ಟು ಮಂದಿಯನ್ನು ಬಂಧಿಸಲಾಗಿದೆ?

ಇ) ಈ ಬಗ್ಗೆ ತನಿಖೆಗಾಗಿ ಸೌದಿ ಅರೇಬಿಯಾಕ್ಕೆ ಪೊಲೀಸರು ತಂಡವನ್ನು ಕಳುಹಿಸಲಾಗಿದೆಯೇ?

ಈ) ಮೂತ್ರ ಪಿಂಡವನ್ನು ಕಳೆದುಕೊಂಡವರಿಗೆ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೊಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಉ) ಈ ಪ್ರಕರಣದಲ್ಲಿ ಆಪಾದಿತರಿಂದ ಮೂತ್ರ ಪಿಂಡ ಕಳೆದುಕೊಂಡವರಿಗೆ ಮೂತ್ರ ಪಿಂಡ ಕಳೆದುಕೊಂಡವರಿಗೆ ಪರಿಹಾರ ಒದಗಿಸಲು ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿ ಕೊಳ್ಳಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) 5 ಪ್ರಕರಣಗಳು ಬೆಳಕಿಗೆ ಬಂದಿವೆ (ಈ ಬಗ್ಗೆ 80 ದೂರುಗಳು ಬಂದಿರುತ್ತವೆ)

ಆ) ಈ ಬಗ್ಗೆ ಮೂವರು ವೈದ್ಯರನ್ನು ಹಾಗೂ ಇಬ್ಬರು ಖಾಸಗೀ ವ್ಯಕ್ತಿಗಳನ್ನು ಬಂಧಿಸಲಾಗಿದೆ.

ಇ) ಇಲ್ಲ - ಪೋಲೀಸರು ತಂಡ ಸೌದಿ ಅರೇಬಿಯಾಕ್ಕೆ ತೆರೆಸಲು ಕೇಂದ್ರ ಸರ್ಕಾರದ ಆದೇಶಗಳನ್ನು ನಿರೀಕ್ಷಿಸಲಾಗಿದೆ.